**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2023–24 ದಿನಾಂಕ:01–04–2024

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 69ನೆಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07–03–2024 ಗುರುವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದಿತ್ತು. ಈ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದ್ದು ಅವಗಾಹಿಸಲು ಕೋರಿದೆ.

ಈ ಪತ್ರ ತಲುಪಿದ ದಿನಾಂಕದಿಂದ 10 ದಿನಗಳೊಳಗೆ ಯಾವುದೇ ಆಕ್ಷೇಪಣೆಗಳು (ಲಿಖಿತ/ಇ–ಮೇಲ್ ಮೂಲಕ) ಸ್ವೀಕೃತವಾಗದಿದ್ದಲ್ಲಿ ನಡಾವಳಿಗಳು ಮಾನ್ಯ ಸದಸ್ಯರಿಂದ ಅಂಗೀಕೃತವಾಗಿವೆ ಎಂದು ಭಾವಿಸಲಾಗುವುದು.

ವಂದನೆಗಳೊಂದಿಗೆ,

ಕುಲಸಚಿವರು

ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

ಇವರಿಗೆ:

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ –ಸದಸ್ಯರು
3. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) –ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
6. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
7. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ ನಗರ, ಬೆಳಗಾವಿ – 19 – ಸದಸ್ಯರು

ಪ್ರತಿಗಳು:

1. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001
2. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
3. ಕಛೇರಿ ಪ್ರತಿ.

0

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ದಿ: 07.03.2024ರಂದು ನಡೆದ ಪ್ರಶಾಸನ ಸಮಿತಿಯ 69ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 69ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 07–03–2024** ಗುರುವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಎಮ್. ಸತ್ಯವತಿ, ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಮುಜರಾಯಿ) – ಸದಸ್ಯರು
3. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
4. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
5. ಪ್ರೊ. ವಿ. ಗಿರೀಶಚಂದ್ರ, ಕುಲಸಚಿವರು(ಪ್ರ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. – ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ – ಸದಸ್ಯರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ –ಸದಸ್ಯರು
3. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19 – ಸದಸ್ಯರು
4. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ | ವಿಷಯ ಮತ್ತು ಟಿಪ್ಪಣಿ |
|---|---|
| **01.** | **ಹಣಕಾಸು ಸಮಿತಿ 45ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.**<br>ದಿ: 28.11.2023ರಂದು ನಡೆದ ಹಣಕಾಸು ಸಮಿತಿಯ 45ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಹಣಕಾಸು ಸಮಿತಿಯ 45ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| **02.** | **ಹಣಕಾಸು ಸಮಿತಿ 46ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.**<br>ದಿ: 06.03.2024ರಂದು ನಡೆದ ಹಣಕಾಸು ಸಮಿತಿಯ 46ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಹಣಕಾಸು ಸಮಿತಿಯ 46ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |

| | |
|---|---|
| **03.** | **ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.**<br>ದಿ: 03.01.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಶಿಕ್ಷಣ ಪರಿಷತ್ತಿನ 37ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| **04.** | **ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.**<br>ದಿ: 06.03.2024ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಶಿಕ್ಷಣ ಪರಿಷತ್ತಿನ 38ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| **05.** | **ಪ್ರಶಾಸನ ಸಮಿತಿ 68ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>**ದಿನಾಂಕ: 30-09-2023** ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಶಾಸನ ಸಮಿತಿಯ ಅರವತ್ತ ಎಂಟನೆಯ ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಪ್ರಶಾಸನ ಸಮಿತಿ 68ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |
| **06.** | **ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮದಂತೆ ಕ್ರಮ ಕೈಗೊಳ್ಳುವ ಕುರಿತು.**<br>ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಇವರು ಅನಧಿಕೃತವಾಗಿ 20.01.2020ರಿಂದ ಅನಧಿಕೃತವಾಗಿ ಸೇವೆಗೆ ಗೈರು ಹಾಜರಾಗಿದ್ದು, ಈ ಬಗ್ಗೆ ಇವರ ವಿರುದ್ಧ ಅನುಬಂಧ 1-4 ಜಾರಿಗೊಳಿಸಿ, ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಆದೇಶಿಸಿ ಸದರಿಯವರಿಗೆ ನೋಟೀಸ್ ಜಾರಿ ಮಾಡಿ, ವಿಚಾರಣೆ ನಡೆಸಿ, ದಿ: 19.09.2023ರಂದು ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯ ವರದಿ ಸಲ್ಲಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಸೇಇವಿ 2001, ದಿ: 14.09.2001ರ ಕಂಡಿಕೆ 02ರಂತೆ ಮತ್ತು ಸಿ.ಸಿ.ಎ. ನಿಯಮ 8 (vii) ರಂತೆ ಕ್ರಮ ಕೈಗೊಳ್ಳುವ ಬಗ್ಗೆ 68ನೇ ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯ ನಿರ್ಣಯದಂತೆ ಶ್ರೀ ಪ್ರಸನ್ನಕುಮಾರ ಪಿ., ಡಿ. ಗ್ರೂಪ್(ಜವಾನ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ವಿಚಾರಣಾ ವರದಿಯ ಪ್ರತಿಯನ್ನು 2 ಬಾರಿ ನೋಂದಾಯಿತ ಅಂಚೆ ಮೂಲಕ ರವಾನಿಸಲಾಗಿದ್ದು, ಸದರಿಯವರಿಂದ ಸ್ವೀಕೃತವಾಗದೇ ವಾಪಸ್ಸಾಗಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ 22(16 ಮತ್ತು 17) ರಂತೆ ನೇಮಕಾತಿ/ನೌಕರರ ವಜಾ ಇತ್ಯಾದಿಗಳಿಗೆ ಪ್ರಶಾಸನ ಸಮಿತಿಯು ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಸದರಿ ನೌಕರರ ವಿರುದ್ಧ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಸೇಇವಿ 2001, ದಿ: 14.09.2001ರ ಕಂಡಿಕೆ 02ರಂತೆ ಮತ್ತು ಸಿ.ಸಿ.ಎ. ನಿಯಮ 8 (vii) ರಂತೆ ಕ್ರಮ ಕೈಗೊಳ್ಳುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಮುಂದೂಡಲಾಯಿತು.** |
| **07.** | **ಶ್ರೀ ಸಿದ್ದಲಿಂಗೇಶ್ವರ ಬಿ.ಎ.ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ದಗಂಗಾಮಠ, ತುಮಕೂರು- ಈ ಕಾಲೇಜನ್ನು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಕುರಿತು.**<br>ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ(ರಿ.) ಶ್ರೀ ಸಿದ್ದಗಂಗಾಮಠ, ತುಮಕೂರು- ಈ ಆಡಳಿತ ಮಂಡಳಿಗೆ ಒಳಪಟ್ಟ ಶ್ರೀ ಸಿದ್ದಲಿಂಗೇಶ್ವರ ಬಿ.ಎ.ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ದಗಂಗಾಮಠ, ತುಮಕೂರು- ಈ ಕಾಲೇಜನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಕಾಲೇಜು ಶಿಕ್ಷಣ ಇಲಾಖೆಗೆ |

| | |
|---|---|
| | ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 27.09.2023 ರಂದು ನಡೆದ 36ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ ಹಾಗೂ ದಿನಾಂಕ: 30.09.2023 ರಂದು ಪ್ರಶಾಸನ ಸಮಿತಿಯ ಸಭೆಯಲ್ಲಿ ನಿರ್ಣಯಿಸಿದಂತೆ, ಈ ಕಾಲೇಜಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಲು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ: 08.11.2023ರಂದು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ಈ ಕೆಳಕಂಡಂತೆ ಅಭಿಪ್ರಾಯಿಸಿ ವರದಿ ನೀಡಿದೆ.<br>**"ಈ ಕಾಲೇಜನ್ನು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ವರ್ಗಾಯಿಸಿ ತುಮಕೂರು ವಿಶ್ವವಿದ್ಯಾನಿಲಯದ ಅಧಿಕಾರದ ಅಡಿಯಲ್ಲಿ ಕೆಲಸ ಮಾಡಲು ಸಮಿತಿಯ ನಿರಾಕ್ಷೇಪಣಾ ಅಭಿಪ್ರಾಯವಿರುತ್ತದೆ.**<br>**ತುಮಕೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವು ಅಸ್ತಿತ್ವದಲ್ಲಿದ್ದು ಅದರಡಿಯಲ್ಲಿ ಈ ಕನ್ನಡ ಪಂಡಿತ್ ಕಾಲೇಜನ್ನು ತರುವುದು ಸೂಕ್ತವಾಗಿರುತ್ತದೆ. ಅಲ್ಲದೆ, ಈ ಕಾಲೇಜಿನ ಶೈಕ್ಷಣಿಕ ಹಾಗೂ ಆಡಳಿತವು ತುಮಕೂರು ವಿಶ್ವವಿದ್ಯಾಲಯದ ಅಧೀನದಲ್ಲಿ ತರುವುದೂ ಸಹ ಸೂಕ್ತವಾಗಿರುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಕೋರ್ಸ್‌ಗಳನ್ನು ನಡೆಸುತ್ತಿದ್ದು, ಈ ಕನ್ನಡ ಪಂಡಿತ್ ಕಾಲೇಜಿನಲ್ಲಿ ಕನ್ನಡವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಲಾಗುತ್ತಿದೆ. ಎಲ್ಲಾ ಶೈಕ್ಷಣಿಕ ವ್ಯವಹಾರಗಳು ತುಮಕೂರು ವಿಶ್ವವಿದ್ಯಾಲಯದಲ್ಲಿ ಇದ್ದು, ವೇತನ ಹಾಗೂ ಆಡಳಿತವನ್ನು ಸಂಸ್ಕೃತ ವಿಶ್ವವಿದ್ಯಾಲಯವು ನಿರ್ವಹಿಸುತ್ತಿದೆ.**<br>**ಹಾಗಾಗಿ, ಮೇಲಿನ ಅಂಶಗಳನ್ನು ಅವಗಾಹಿಸಿ ಒಂದೇ ಅಧಿಕಾರದಲ್ಲಿ ಶೈಕ್ಷಣಿಕ ಮತ್ತು ಆಡಳಿತವು ಇರುವುದು ಉತ್ತಮವೆಂದು ಸಮಿತಿಯು ಮನಗಂಡಿದೆ. ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಮೇಲ್ಕಂಡ ಸಂಗತಿಯು ಹಿತವಾಗಿರುವುದಲ್ಲದೆ, ಕನ್ನಡ ಶಾಸ್ತ್ರೀಯ ಭಾಷೆಗೆ ಸೂಕ್ತ ಸ್ಥಾನ ಮಾನ ನೀಡಿದಂತಾಗುತ್ತದೆ"** ಎಂದು ಸಮಿತಿಯು ಶಿಫಾರಸ್ಸು ಮಾಡಿದೆ. ಸಮಿತಿಯು ನೀಡಿರುವ ವರದಿಯನ್ನು ಪತ್ರ ಸಂಖ್ಯೆ: ಕಸಂವಿ/ಇಂ.ಕ.ಪಂ.ಕಾ.ಸ.ವ/2023–24/212 ರಂತೆ ದಿನಾಂಕ: 21.11.2023 ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಒಂದೇ ಅಧಿಕಾರದಲ್ಲಿ ಶೈಕ್ಷಣಿಕ ಮತ್ತು ಆಡಳಿತವು ಇರುವುದು ಉತ್ತಮವೆಂದು ಸಮಿತಿಯು ನೀಡಿದ ಅಭಿಪ್ರಾಯದಂತೆ ಶ್ರೀ ಸಿದ್ದಲಿಂಗೇಶ್ವರ ಬಿ.ಎ.ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ಶ್ರೀ ಸಿದ್ದಗಂಗಾಮಠ, ತುಮಕೂರು– ಈ ಕಾಲೇಜನ್ನು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ಬಗ್ಗೆ ಸರ್ಕಾರಕ್ಕೆ ಪತ್ರ ಸಲ್ಲಿಸಿರುವುದನ್ನು ಸಭೆಯು ಅನುಮೋದಿಸಿತು.** |
| **08.** | **ರಾಜ್ಯಸ್ತರೀಯ ಶಾಸ್ತ್ರೀಯ ವಾಕ್ಪ್ರತಿಯೋಗಿತಾ ಸ್ಪರ್ಧೆಗಳನ್ನು ಆಯೋಜಿಸಿರುವ ಬಗ್ಗೆ.**<br>ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿ ವರ್ಷವೂ ರಾಷ್ಟ್ರಮಟ್ಟದಲ್ಲಿ ಸಂಸ್ಕೃತ ವಾಕ್ಪ್ರತಿಯೋಗಿತಾ ಸ್ಪರ್ಧೆಗಳನ್ನು ಆಯೋಜಿಸುತ್ತಿದೆ. ಅದರ ಪೂರ್ವಭಾವಿಯಾಗಿ ರಾಜ್ಯಮಟ್ಟದಲ್ಲಿ ಸ್ಪರ್ಧೆಗಳನ್ನು ನಡೆಸಿ ಪ್ರತಿ ವಿಷಯದಲ್ಲಿ 1 ಸ್ಪರ್ಧಾಳುವನ್ನು ಆಯ್ಕೆ ಮಾಡಿ ಕಳುಹಿಸಬೇಕು. ಸಂಸ್ಕೃತ ಕಲಿಕೆಯ ಉತ್ತೇಜನಕ್ಕಾಗಿ ವಿಶ್ವವಿದ್ಯಾಲಯ ಸ್ಥಾಪನೆಗೂ ಮೊದಲು ಸರ್ಕಾರದಿಂದಲೂ ಸಹ ಅನೇಕ ವರ್ಷಗಳಿಂದ ವಾಕ್ಪ್ರತಿಯೋಗಿತಾವನ್ನು ಆಯೋಜಿಸಲಾಗುತ್ತಿದೆ.<br>ಪ್ರಸ್ತುತ ಸಾಲಿನಲ್ಲಿ ಒಟ್ಟೂ 32 ಸ್ಪರ್ಧೆಗಳನ್ನು ನಡೆಸಲಾಗಿದ್ದು, ಆಯ್ಕೆಯಾದ ಸ್ಪರ್ಧಾರ್ಥಿಗಳು ದಿ: 19.03.2024ರಿಂದ ಅಯೋಧ್ಯೆಯಲ್ಲಿ ನಡೆಯುವ ರಾಷ್ಟ್ರಸ್ತರೀಯ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾರೆ. ರಾಜ್ಯ ಮಟ್ಟದ ಸ್ಪರ್ಧೆಯ ನಿರ್ಣಾಯಕರಿಗೆ ಪ್ರತಿ ಸ್ಪರ್ಧೆಗೆ 1000/- ರೂ. ಮತ್ತು ನಿಯಮಾನುಸಾರ ಪ್ರಯಾಣ ಭತ್ಯೆ |

| | |
|---|---|
| | ನೀಡಲಾಗಿದ್ದು, ಈ ಬಗ್ಗೆ ಸಭೆಯ ಘಟನೋತ್ತರ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ರಾಜ್ಯ ಮಟ್ಟದ ಶಾಸ್ತ್ರೀಯ ವಾಕ್ಪ್ರತಿಯೋಗಿತಾ ಸ್ಪರ್ಧೆಯ ನಿರ್ಣಾಯಕರಿಗೆ ಪ್ರತಿ ಸ್ಪರ್ಧೆಗೆ 1000/- ರೂ. ಮತ್ತು ನಿಯಮಾನುಸಾರ ಪ್ರಯಾಣ ಭತ್ಯೆ ನೀಡಿರುವುದನ್ನು ಸಭೆಯು ಅನುಮೋದಿಸಿತು.** |
| **09.** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ/ಖಾಸಗಿ ಅನುದಾನಿತ ಸಂಸ್ಕೃತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಮತ್ತು ಸೇವಾ ವಿಷಯಗಳ ಬಗ್ಗೆ.**<br>ರಾಜ್ಯದ ಖಾಸಗಿ ಮತ್ತು ಖಾಸಗಿ ಅನುದಾನಿತ ಪಾಠಶಾಲೆ ಮತ್ತು ಕಾಲೇಜುಗಳನ್ನು ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಗೆ ವರ್ಗಾಯಿಸಿ, ಇವುಗಳ ನಿರ್ವಹಣೆಗೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 218 ಯುಆರ್‌ಸಿ 2010; ದಿನಾಂಕ: 15.06.2011ರಂತೆ ವಿಶ್ವವಿದ್ಯಾಲಯದಡಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ಇವುಗಳ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯು ರೂಪಿಸಿದ್ದ ಸಂಸ್ಕೃತ ಅನುದಾನ ಸಂಹಿತೆ (Grant-in-aid Code) ಯನ್ನು ಅನುಸರಿಸಲಾಗುತ್ತಿದ್ದು, ಅದರಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯೂ ಸಹ ನಿಯಮ, ಪರಿನಿಯಮಗಳನ್ವಯ ವಿಶ್ವವಿದ್ಯಾಲಯದ ಆಡಳಿತಾತ್ಮಕ ಮತ್ತು ಇತರ ವಿಷಯಗಳನ್ನು ನಿರ್ವಹಿಸಬೇಕಿದೆ. ಪ್ರಸ್ತುತ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ/ಖಾಸಗಿ ಅನುದಾನಿತ ಸಂಸ್ಕೃತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಯಾವುದೇ ಪರಿನಿಯಮವು ಅನುಮೋದನೆಯಾಗಿರುವುದಿಲ್ಲ ಹಾಗೂ Grant in Aid ನಿಯಮಗಳು ತಿದ್ದುಪಡಿಯಾಗಿಲ್ಲ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯು ನಡೆಸುವ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಸರ್ಕಾರಿ ಆದೇಶದಂತೆ ದಿ: 03.05.2022ರ ಪತ್ರದಲ್ಲಿ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿದೆ. ಸಂಸ್ಕೃತ ಪಾಠಶಾಲೆ, ಕಾಲೇಜುಗಳನ್ನು ಸಹ ವಿಶ್ವವಿದ್ಯಾಲಯದ ವ್ಯಾಪ್ತಿಗೆ ವರ್ಗಾಯಿಸಿದ್ದರಿಂದ ಇವುಗಳ ಆಡಳಿತಾತ್ಮಕ ಮತ್ತು ಸೇವಾ ವಿಷಯಗಳನ್ನು ನಿರ್ದೇಶನಾಲಯವು ನಿರ್ವಹಿಸುವ ಬಗ್ಗೆ ಪ್ರಶಾಸನ ಸಮಿತಿಯ ಅನುಮೋದನೆ ಪಡೆದು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ನಿರ್ದೇಶನಾಲಯಕ್ಕೆ ಸಂಬಂಧಿಸಿದ ಪರಿನಿಯಮವನ್ನು ಅಗತ್ಯ ಸ್ಪಷ್ಟನೆಯೊಂದಿಗೆ ಪುನಃ ಸರ್ಕಾರದ ಅನುಮೋದನೆಗೆ ಸಲ್ಲಿಸುವುದು ಹಾಗೂ ಸಂಸ್ಕೃತ ಪಾಠಶಾಲೆ, ಕಾಲೇಜುಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದ್ದರಿಂದ ಅವುಗಳ ಕಾರ್ಯ ಚಟುವಟಿಕೆಗಳು ಮುಂದುವರಿಯಬೇಕು. ಆದ್ದರಿಂದ ನಿರ್ದೇಶನಾಲಯದ ಪರಿನಿಯಮ ಅನುಮೋದನೆಯಾಗುವವರೆಗೆ ಯಥಾಸ್ಥಿತಿಯನ್ನು ಮುಂದುವರಿಸಿ (Grant-in-aid Code - 1979) ಅನುದಾನ ಸಂಹಿತೆಯನ್ನು ಅನುಸರಿಸಲು ತೀರ್ಮಾನಿಸಲಾಯಿತು.** |
| **10.** | **10 ಮತ್ತು 11ನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸುವ ಬಗ್ಗೆ.**<br>ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಘನತೆವೆತ್ತ ರಾಜ್ಯಪಾಲರ ನಿರ್ದೇಶನದಂತೆ 10 ಮತ್ತು 11ನೇ ದೀಕ್ಷಾಂತ ಘಟಿಕೋತ್ಸವವನ್ನು ಆಯೋಜಿಸಲು ಹಾಗೂ ಘಟಿಕೋತ್ಸವದಲ್ಲಿ ಗೌರವ ಡಿ.ಲಿಟ್. ಪದವಿಯನ್ನು ಪ್ರದಾನ ಮಾಡಲು ಅರ್ಹ ವಿದ್ವಾಂಸರ ಹೆಸರನ್ನು ಪ್ರಶಾಸನ ಸಮಿತಿಯ ಮಾನ್ಯ ಸದಸ್ಯರು ಸೂಚಿಸುವ ಬಗ್ಗೆ |

| | |
|---|---|
| | ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | ವಿಶ್ವವಿದ್ಯಾಲಯದ ವತಿಯಿಂದ ಪ್ರದಾನ ಮಾಡುವ ಡಿ.ಲಿಟ್. ಪದವಿಗೆ ಅರ್ಹ ವಿದ್ವಾಂಸರ ಹೆಸರನ್ನು ಸೂಚಿಸಲು ಕುಲಪತಿಗಳು/ಕುಲಸಚಿವರಿಗೆ ಅಧಿಕಾರ ನೀಡಲಾಯಿತು. |
| **11.** | **ಕುಲಸಚಿವರು(ಮೌಲ್ಯಮಾಪನ) ಇವರಿಗೆ ಪರೀಕ್ಷಾಂಗಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಹಸ್ತಾಂಕನದ ಅಧಿಕಾರವನ್ನು ಪ್ರತ್ಯಾಯೋಜಿಸುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮದಂತೆ ಕುಲಸಚಿವರು(ಮೌಲ್ಯಮಾಪನ) ಹುದ್ದೆಗೆ ಕೆ.ಎ.ಎಸ್. ಅಧಿಕಾರಿ ಅಥವಾ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ನಿಯೋಜಿಸಬಹುದಾಗಿರುತ್ತದೆ. ಪ್ರಸ್ತುತ ಈ ಹುದ್ದೆಗೆ ಯಾವುದೇ ಅಧಿಕಾರಿಯ ನಿಯೋಜನೆಯಾಗಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ಡಾ. ರಾಮಕೃಷ್ಣ ಭಟ್ ಕೆ., ಸಹಾಯಕ ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ ಇವರನ್ನು ಕುಲಸಚಿವರು(ಮೌಲ್ಯಮಾಪನ) ಹುದ್ದೆಗೆ ಪ್ರಭಾರಿಯಾಗಿ ನೇಮಿಸಲಾಗಿದ್ದು, ಕುಲಸಚಿವರು(ಮೌಲ್ಯಮಾಪನ) ಇವರಿಗೆ ಅಂಕಪಟ್ಟಿ, ವಲಸೆ ಪ್ರಮಾಣಪತ್ರ, ಪ್ರೊವಿಷನಲ್/ಕೋರ್ಸ್‌ಗಳ ಪ್ರಮಾಣಪತ್ರ ಮೊದಲಾದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | ಕುಲಸಚಿವರು(ಮೌಲ್ಯಮಾಪನ) ಇವರಿಗೆ ಪರೀಕ್ಷಾಂಗಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಹಸ್ತಾಂಕನದ ಅಧಿಕಾರವನ್ನು ಪ್ರತ್ಯಾಯೋಜಿಸಲು ಸಭೆಯು ಅನುಮೋದಿಸಿತು. |
| **12.** | **"ಕರ್ನಾಟಕ ಸಂಸ್ಕೃತಾಧ್ಯಯನಂ" ಷಾಣ್ಮಾಸಿಕ ಶೋಧಪತ್ರಿಕೆಯ ಲೇಖನಗಳನ್ನು ಪರಿಷ್ಕರಿಸಿದ ವಿದ್ವಾಂಸರಿಗೆ ಗೌರವ ಧನ ನೀಡುವ ಬಗ್ಗೆ.**<br>ವಿಶ್ವವಿದ್ಯಾಲಯವು **"ಕರ್ನಾಟಕ ಸಂಸ್ಕೃತಾಧ್ಯಯನಂ"** ಎಂಬ ಷಾಣ್ಮಾಸಿಕ ಶೋಧಪತ್ರಿಕೆಯನ್ನು ಪ್ರಕಟಿಸುತ್ತಿದ್ದು, ಇದು ISSN ಸಂಖ್ಯೆಯನ್ನು ಪಡೆದ ಪ್ರತಿಷ್ಠಿತ ಪತ್ರಿಕೆಯಾಗಿದೆ. ಮೌಲಿಕ ಲೇಖನಗಳ ಪ್ರಕಾಶನದಿಂದ ಸಂಸ್ಕೃತ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ ಇದು ಉತ್ತಮ ಅವಕಾಶವನ್ನು ಕಲ್ಪಿಸುತ್ತದೆ. ಆದ್ದರಿಂದ ಈ ಶೋಧ ಪತ್ರಿಕೆಯನ್ನು ಉತ್ತಮ ಗುಣಮಟ್ಟದ ಮೂಲಕ UGC Care List ನಲ್ಲಿ ಸೇರಿಸುವ ಗುರಿಯನ್ನು ಹೊಂದಿದ್ದು ಈ ನಿಟ್ಟಿನಲ್ಲಿ ಪ್ರಕಟಣೆಗೆ ಬರುವ ಲೇಖನಗಳನ್ನು ಪರಿಣಿತ ವಿದ್ವಾಂಸರಿಂದ ಪರಿಶೀಲನೆ, ಪರಿಷ್ಕರಣಗೆ ಕಳುಹಿಸಿ ವರದಿ ಪಡೆಯಲಾಗಿದೆ. ಪ್ರಸ್ತುತ ಲೇಖನಗಳನ್ನು ಪರಿಷ್ಕರಿಸಿದ ವಿದ್ವಾಂಸರಿಗೆ ಪ್ರತಿ ಲೇಖನಕ್ಕೆ 300/- ರೂ. ಗೌರವಧನ ಪಾವತಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | "ಕರ್ನಾಟಕ ಸಂಸ್ಕೃತಾಧ್ಯಯನಂ" ಷಾಣ್ಮಾಸಿಕ ಶೋಧಪತ್ರಿಕೆಯ ಲೇಖನಗಳನ್ನು ಪರಿಷ್ಕರಿಸಿದ ವಿದ್ವಾಂಸರಿಗೆ ಪ್ರತಿ ಲೇಖನಕ್ಕೆ 300/- ರೂ. ಗೌರವ ಧನ ನೀಡಲು ಸಭೆಯು ಅನುಮೋದಿಸಿತು. |

| 13 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ–ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷಾ ಸಂಬಂಧಿ ಭತ್ಯೆಗಳ ದರಗಳನ್ನು ಪರಿಷ್ಕರಿಸುವ ಬಗ್ಗೆ.**<br>ದಿನಾಂಕ: 09.06.2023ರಂದು ನಡೆದ ಹಣಕಾಸು ಸಮಿತಿ 43ನೇ ಸಭೆಯಲ್ಲಿ ಮತ್ತು ದಿನಾಂಕ: 24.07.2023ರಂದು ನಡೆದ ಪ್ರಶಾಸನ ಸಮಿತಿ 67ನೇ ಸಭೆಯಲ್ಲಿ ವಿಶ್ವವಿದ್ಯಾಲಯದ ಸ್ನಾತಕ–ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷಾ ಸಂಬಂಧಿ ಭತ್ಯೆಗಳನ್ನು ಬೆಂಗಳೂರು ವಿಶ್ವವಿದ್ಯಾಲಯ ಮತ್ತು ತುಮಕೂರು ವಿಶ್ವವಿದ್ಯಾಲಯಗಳಂತೆ ಪರಿಷ್ಕರಿಸಲು ತೀರ್ಮಾನಿಸಲಾಗಿತ್ತು. ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರು ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯದ ಭತ್ಯೆಯ ದರದ ವಿವರವನ್ನು ಪಡೆದು, ಅದರ ಆಧಾರದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಿಗದಿಪಡಿಸಬಹುದಾದ ಪರೀಕ್ಷಾ ಕಾರ್ಯದ ವಿವಿಧ ಭತ್ಯೆಗಳ ದರಗಳ ವಿವರವನ್ನು ದಿ: 08.01.2024ರಂದು ಮಾನ್ಯ ಕುಲಪತಿಗಳಿಗೆ ಸಲ್ಲಿಸಿದ್ದು, ವಿವರ ಈ ಕೆಳಗಿನಂತಿದೆ. |
|---|---|

| Sl. No. | Particulars | Existing (KSU) | Bangalore University | K State Govt. | Revised (KSU) |
|---|---|---|---|---|---|
| (1) | (2) | (3) | (4) | (5) | (6) |
| 1 | UG Question Paper Preparation | Rs. 250.00 per Paper | UG- Rs. 300.00 | Rs. 750.00 | Rs. 350.00 |
| 2 | PG & PG Diploma Question Paper Preparation | Rs. 300.00 per Paper | PG – Rs. 350.00<br>PGD – Rs. 300.00 | Rs. 750.00 | PG - Rs. 400.00<br>PGD - Rs. 375.00 |
| 3 | QP Scrutiny | Rs. 50.00 per Paper | | - | Rs. 100.00 |
| 4 | UG Valuation per Script | Rs. 12.00 per Script | Rs. 15.00 Per Script | Rs. 15.00 | Rs. 15.00 |
| 5 | UG Valuation per Script (less than 2 hours) | - | - | - | Rs. 7.00 |
| 6 | PG & PG Diploma Valuation per Script | Rs. 15.00 per Script | Rs. 18.00 Per Script | Rs. 20.00 | Rs. 18.00 |
| 7 | PG & PG Diploma Valuation per Script (less than 2 hours) | - | - | - | Rs. 7.00 |
| 8 | Certificate, Diploma Valuation per Script | Rs. 10.00 per Script | - | - | Rs. 12.00 (2 to 3 hours)<br>Rs. 5.00 (Less than 2 hours) |
| 9 | Centralised examination Question Paper setting, Scrutiny & Valuation DA for External Examiners and Root Officers, Recipients of the exam materials - DA (All exams) | Rs. 350 | Rs. 1200.00 | Rs. 1200 +TA | 1000.00 |

| | | | | | |
|---|---|---|---|---|---|
| 10 | Centralised examination Question Paper setting, Scrutiny & Valuation TA for External Examiners, Recipients of the exam materials (All exams) | As per KCSR (To revise whenever KCSR rates change) + Local auto charge 200.00 | | - | As per KCSR (To revise whenever KCSR rates change) + Local auto charge 200.00 |
| 11 | Allowance for Local Examiners | Rs. 300.00 | Rs. 800.00 | Rs. 800.00 | Rs. 400.00 |
| 12 | Travel Allowance for Local Examiners | Rs. 200.00 | - | - | Rs. 200.00 |
| 13 | Ph.D. Entrance Examination Question Paper setting (Per set) | - | Rs. 2000.00 | - | Rs. 1500.00 |
| 14 | Ph.D. Course Work Examination Question Paper setting (Per set) | - | Rs. 2000.00 | - | Rs. 1500.00 |
| 15 | Ph.D. Entrance Examination Valuation (per Script) | - | Rs. 50.00 | - | Rs. 25.00 |
| 16 | Ph.D. Course Work Examination Valuation (per Script) | | Rs. 50.00 | - | Rs. 25.00 |
| 17 | Ph.D. Thesis Valuation Remuneration | Rs. 2000.00 | Rs. 3000.00 | - | Rs. 2000.00 (With postal charges) |
| 18 | Ph.D. Viva-voce Remuneration | Rs. 2000.00 | Rs. 2000.00 | - | Rs. 2000.00 |
| 19 | PhD Viva-voce examiners TA | - | - | - | As per KCSR or UGC norms Bus, Train, flight actual bills may be given |
| 20 | PhD Viva-voce examiners TA – Own car | - | - | - | 10/- per KM |
| 21 | PhD Viva-voce examiners DA | - | - | - | Actual bills |
| | **Remuneration to Examination Centres & Staff** | | | | |
| 22 | Exam Centre Superintendent | Rs. 65.00 per session | Rs. 600.00 (Per day) | Rs. 900.00 | Rs. 300.00 (Per day) |
| 23 | Room Invigilator | Rs. 50.00 per session | Rs. 150.00 per session | | Rs. 100.00 per session |
| 24 | Assistants (Upto 750 Students 1 Assistant) | Rs. 50 per day | Rs. 300 per day | Rs. 400.00 | Rs. 200.00 per day |
| 25 | D Group (Upto 750 Students 1 D Group) | Rs. 40 per day | Rs. 150 per day | Rs. 350.00 | Rs. 100.00 per day |
| 26 | Contingency | Actuals | - | - | Actual bills |
| 27 | OQPDS – Question Paper Printing cost | - | | - | 2.00 (Per sheet) (No of sheets + No of Question Papers x No of students |
| | **Remuneration to Valuation Centre** | | | | |
| 28 | Valuation Centre Superintendent (Per day) | Rs. 850.00 | Rs. 700.00 | Rs. 1000.00 | Rs. 900.00 |
| 29 | Deputy Superintendent (Per | Rs. 650.00 | - | Rs. 850.00 | Rs. 700.00 |

| | | | | | |
|---|---|---|---|---|---|
| | day) | | | | |
| 30 | Assistant (Per day) | Rs. 350.00 | Rs. 300.00 | Rs. 800.00 | Rs. 500.00 |
| 31 | D Group (Per day) | Rs. 120.00 | Rs. 150.00 | Rs. 450.00 | Rs. 400.00 |
| | **Remuneration to Question Paper setting Centre** | | | | |
| 32 | Superintendent (Per day) | | - | - | Rs. 900.00 |
| 33 | Deputy Superintendent (Per day) | | - | - | Rs. 700.00 |
| 34 | Assistant (Per day) | | - | - | Rs. 500.00 |
| 35 | D Group (Per day) | | - | - | Rs. 400.00 |
| | **Remuneration to Practical Examination Centre** | | | | |
| 36 | Chief examiner (Per day) | - | Rs. 700.00 | | Rs. 500.00 |
| 37 | Assistant examiner (Per day) | - | - | | Rs. 300.00 |
| 38 | Assistant (Per day) | - | Rs. 300.00 | | Rs. 200.00 |
| 39 | D Group (Per day) | | Rs. 150.00 | | Rs. 150.00 |
| | **Remuneration to squad** | | | | |
| 40 | Sitting squad or Flying squad Allowance | | Single session per day_ 650<br>Double session per day 850 | | Single session per day_ 650<br>Double session per day 850 |
| 41 | Travel Allowance | | | | As per KCSR (To revise whenever KCSR rates change) + Local auto charge 200.00 |

ಇದರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ಕಾರ್ಯದ ಭತ್ಯೆಯನ್ನು ನೀಡುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| | |
|---|---|
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ-ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷಾ ಸಂಬಂಧಿ ಭತ್ಯೆಗಳ ದರಗಳನ್ನು ಪರಿಷ್ಕರಿಸಿ, ಪರಿಷ್ಕೃತ ದರವನ್ನು ಪಾವತಿಸಲು ಸಭೆಯು ಅನುಮೋದಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು.** |
| **1** | **ಡಾ. ರೂಪಶ್ರೀ ಎಸ್., ಕೆ.ಎ.ಎಸ್. ಇವರ ವರ್ಗಾವಣೆಯಿಂದ ತೆರವಾದ ವಿಶ್ವವಿದ್ಯಾಲಯದ ಕುಲಸಚಿವರ ಹುದ್ದೆಗೆ ಪ್ರೊ. ವಿ. ಗಿರೀಶಚಂದ್ರ, ಹಿರಿಯ ಡೀನ್, ಭಾಷಾ ನಿಕಾಯ ಇವರನ್ನು ಪ್ರಭಾರಿಯಾಗಿ ನೇಮಿಸಿರುವ ಬಗ್ಗೆ.**<br><br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ. ರೂಪಶ್ರೀ ಎಸ್., ಕೆ.ಎ.ಎಸ್. ಇವರನ್ನು ಸರ್ಕಾರಿ ಆದೇಶ ಸಂಖ್ಯೆ: **ಸಿಆಸುಇ 405 ಆಸೇವ 2023, ದಿ: 28.02.2024 ರಂತೆ** ನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ಈ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಿ ಆದೇಶಿಸಿದ್ದು, ಆದೇಶ ಸಂಖ್ಯೆ: **ಇಪಿ 21 ಡಿಪಿಐ 2024, ದಿ: 02.03.2024ರಂತೆ** ಸದರಿಯವರಿಗೆ ಚಾಲನಾದೇಶ ನೀಡಲಾಗಿದೆ. ವಿಶ್ವವಿದ್ಯಾಲಯದ ಕುಲಸಚಿವರ ಹುದ್ದೆಗೆ ಸರ್ಕಾರದಿಂದ ಬೇರೆ ಅಧಿಕಾರಿಯ ನೇಮಕವಾಗಿಲ್ಲ. ಆದ್ದರಿಂದ ತೆರವಾದ ವಿಶ್ವವಿದ್ಯಾಲಯದ ಕುಲಸಚಿವ ಹುದ್ದೆಯ ಕಾರ್ಯ |

ನಿರ್ವಹಣೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009, ಉಪಬಂಧ 16(1)ರಂತೆ **ಪ್ರೊ. ವಿ. ಗಿರೀಶಚಂದ್ರ**, ಹಿರಿಯ ಡೀನ್, ಭಾಷಾ ನಿಕಾಯ ಇವರನ್ನು ಮುಂದಿನ ಆದೇಶದವರೆಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ) ಹುದ್ದೆಯಲ್ಲಿ ಪ್ರಭಾರದಲ್ಲಿರಿಸಿದ್ದು, ಸಭೆಯ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

ನಿರ್ಣಯ: **ಪ್ರೊ. ವಿ. ಗಿರೀಶಚಂದ್ರ, ಹಿರಿಯ ಡೀನ್, ಭಾಷಾ ನಿಕಾಯ ಇವರನ್ನು ವಿಶ್ವವಿದ್ಯಾಲಯದ ಕುಲಸಚಿವರ ಹುದ್ದೆಗೆ ಪ್ರಭಾರಿಯಾಗಿ ನೇಮಿಸಿರುವುದನ್ನು ಸಭೆಯು ಅನುಮೋದಿಸಿತು.**

**02. ವಿಶ್ವವಿದ್ಯಾಲಯದ ತಿಪ್ಪಸಂದ್ರದ ನೂತನ ಆವರಣದಲ್ಲಿ ಬಿ.ಎಡ್. ಕೋರ್ಸ್‌ನ್ನು ಪ್ರಾರಂಭಿಸಲು ಅಗತ್ಯ ಹುದ್ದೆಗಳ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.**

ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಭಾಷೆ & ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ವ್ಯಾಕರಣ ಶಾಸ್ತ್ರ, ನ್ಯಾಯ & ವೈಶೇಷಿಕ, ಅಲಂಕಾರ ಶಾಸ್ತ್ರ, ವೇದಾಂತ ವಿಭಾಗಗಳಲ್ಲಿ ವಿವಿಧ ಕೋರ್ಸ್ಗಳು, ಸಂಸ್ಕೃತ ಬಿ.ಎ, ಸಂಸ್ಕೃತ ಎಂ.ಎ, ಪಿ.ಎಚ್‌ಡಿ ಪದವಿ ತರಗತಿಗಳು ನಡೆಯುತ್ತಿದ್ದು, ಅನೇಕ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೇ, ಸಂಯೋಜಿತ ಸಂಸ್ಕೃತ ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಸ್ಕೃತ ಬಿ.ಎ ಮತ್ತು ಎಂ.ಎ ಪದವಿಗಳನ್ನು ಪಡೆದುಕೊಂದು ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್ಗಳನ್ನು ಪಡೆಯಲು ಹಂಬಲಿಸುತ್ತಿದ್ದಾರೆ.

ಆದರೆ, ಕರ್ನಾಟಕದಲ್ಲಿ ವೃತ್ತಿಪರ ಕೋರ್ಸ್ ಆದ ಸಂಸ್ಕೃತ ಬಿ.ಇಡಿ ಕಾಲೇಜು ಕೇಂದ್ರಿಯ ವಿಶ್ವವಿದ್ಯಾಲಯದ ಅಧೀನದಲ್ಲಿ ಶೃಂಗೇರಿ ಪರಿಸರದಲ್ಲಿ ಮಾತ್ರ ನಡೆಯುತ್ತಿದ್ದು ರಾಜ್ಯದಲ್ಲಿ ಇದೊಂದೇ ಕಾಲೇಜು ಆಗಿರುವುದರಿಂದ ಸಂಸ್ಕೃತ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್ ಬಿ.ಇಡಿ ಕಾಲೇಜಿಗೆ ದಾಖಲಾಗಲು ಅನಾನುಕೂಲವಾಗುತ್ತಿದೆ.

ಆದ್ದರಿಂದ, ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆ ಮತ್ತು ಪ್ರಶಾಸನ ಸಮಿತಿಯ 67ನೇ ಸಭೆಯಲ್ಲಿ ಬಿ.ಇಡಿ ಕೋರ್ಸ್‌ನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ರಾಮನಗರ ಜಿಲ್ಲೆಯ ತಿಪ್ಪಸಂದ್ರದಲ್ಲಿ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ವಸತಿ ನಿಲಯಗಳನ್ನು ನಿರ್ಮಿಸಲಾಗಿದ್ದು, ಕಲಿಕೆಗೆ ಉತ್ತಮವಾದ ವಾತಾವರಣದ ಜೊತೆಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದ್ದು ಈ ಕ್ಯಾಂಪಸ್‌ನಲ್ಲಿ ನೂತನವಾಗಿ ಬಿ.ಇಡಿ ಕಾಲೇಜನ್ನು ಪ್ರಾರಂಭಿಸಲು ಅವಶ್ಯವಿರುವ ಬೋಧಕ ಮತ್ತು ಬೋಧಕೇತರ ವರ್ಗದ ವಿವರ ಈ ಕೆಳಕಂಡಂತಿದೆ.

**ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳು: 07**

| ಕ್ರ.ಸಂ. | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ: | ವೇತನಶ್ರೇಣಿ | ವಾರ್ಷಿಕ ಅಂದಾಜು ವೇತನ |
|---|---|---|---|---|
| 01. | ಪ್ರಾಧ್ಯಾಪಕರು | 01 | 144200–218200 | 245740.00 |
| 02. | ಸಹ ಪ್ರಾಧ್ಯಾಪಕರು | 02 | 131400–217100 | 223980.00 |
| 03. | ಸಹಾಯಕ ಪ್ರಾಧ್ಯಾಪಕರು | 04 | 57700–182400 | 98690.00 |
| | ಒಟ್ಟು | 07 | | 568410.00 |

**ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳು: 15**

| ಕ್ರ.ಸಂ. | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ: | ವೇತನಶ್ರೇಣಿ | ವಾರ್ಷಿಕ ಅಂದಾಜು ವೇತನ |
|---|---|---|---|---|
| 04. | ಹಿರಿಯ ಸಹಾಯಕರು | 01 | 37900–70850 | 62182.00 |
| 05. | ಸಹಾಯಕರು | 02 | 30350–58250 | 99790.00 |

| | | | | |
|---|---|---|---|---|
| 06. | ಗ್ರಂಥಾಲಯ ಸಹಾಯಕರು | 01 | 30350-58250 | 49895.00 |
| 07. | ಡಾಟಾ ಎಂಟ್ರಿ ಆಪರೇಟರ್ | 01 | 27650-52650 | 45500.00 |
| 08. | ಕಿರಿಯ ಸಹಾಯಕರು | 02 | 21400-42000 | 70658.00 |
| 09. | ವಿಶ್ರಾಂತಿಗೃಹ ಮೇಲ್ವಿಚಾರಕ | 01 | 21400-42000 | 35329.00 |
| 10. | ಡಿ-ಗ್ರೂಪ್ (ಕಾವಲುಗಾರರು) | 01 | 17000-28950 | 28168.00 |
| 11. | ಡಿ-ಗ್ರೂಪ್(ಜವಾನ) | 02 | 17000-28950 | 56336.00 |
| 12. | ಗಾರ್ಡನ್ ಕೆಲಸಗಾರರು | 02 | 17000-28950 | 56336.00 |
| 13. | ಮಲ್ಟಿಪರ್ಪಸ್ ಕೆಲಸಗಾರರು | 02 | 17000-28950 | 56336.00 |
| ಒಟ್ಟು | | 15 | | 560530.00 |
| ಯುಜಿಸಿ & ರಾಜ್ಯ ವೇತನ ಒಟ್ಟು ಹುದ್ದೆಗಳು | | 22 | | 1128940.00 |

ವಿಶ್ವವಿದ್ಯಾಲಯದಲ್ಲಿ ಬಿ.ಇಡಿ ಕಾಲೇಜನ್ನು ಪ್ರಾರಂಭಿಸಲು ಅಗತ್ಯವಿರುವ ಈ ಮೇಲಿನ ಹುದ್ದೆಗಳ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ **ವಿಶ್ವವಿದ್ಯಾಲಯದಲ್ಲಿ ಬಿ.ಇಡಿ ಕಾಲೇಜನ್ನು ಪ್ರಾರಂಭಿಸಲು ಅಗತ್ಯವಿರುವ ಹುದ್ದೆಗಳ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿತು.**

03. **ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅಗತ್ಯವಾದ ಹುದ್ದೆಗಳ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011 ರಂತೆ ಒಟ್ಟೂ 133 ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ 51 ರಾಜ್ಯ ವೇತನ ಪಡೆಯುವ ಬೋಧಕೇತರ ಹುದ್ದೆಗಳಿದ್ದು ಇವುಗಳಲ್ಲಿ 35 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಆದರೆ ಈ ಹುದ್ದೆಗಳಿಂದ ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಕಾರ್ಯಗಳನ್ನು ಕ್ಷಿಪ್ರವಾಗಿ, ಸಮರ್ಪಕವಾಗಿ ನಿರ್ವಹಿಸಲು ಕಷ್ಟಸಾಧ್ಯವಾಗುತ್ತದೆ. ಅಲ್ಲದೇ ಪರೀಕ್ಷಾ ವಿಭಾಗದ ಕಾರ್ಯಗಳು ಗೌಪ್ಯ ಮತ್ತು ನಿಯಮಿತವಾಗಿ ನಡೆಯಬೇಕಾಗಿರುತ್ತದೆ. ಪ್ರಸ್ತುತ ಈ ವಿಭಾಗದಲ್ಲಿ ಈ ಕೆಳಗಿನಂತೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಕುಲಸಚಿವರು(ಮೌಲ್ಯಮಾಪನ) – 01

ಯೋಜನಾ ಸಹಾಯಕರು (ಶೈಕ್ಷಣಿಕ) – 04

ಸಹಾಯಕರು – 01

ಸಹಾಯಕರು (ಹೊರಗುತ್ತಿಗೆ) – 02

ಡಿಗ್ರೂಪ್ (ಹೊರಗುತ್ತಿಗೆ) – 01

ಪರೀಕ್ಷಾ ವಿಭಾಗದ ಕಾರ್ಯಗಳನ್ನು ಸುಗಮವಾಗಿ ನಡೆಸಲು ಈ ವಿಭಾಗಕ್ಕೆ ಪ್ರತ್ಯೇಕ ಸಿಬ್ಬಂದಿಗಳ ಅವಶ್ಯಕತೆಯಿದೆ.

| ಕ್ರ. ಸಂ | ಹುದ್ದೆಗಳ ವಿವರ | ಸೃಜನೆಗೊಂಡಿರುವ ಹುದ್ದೆಗಳ ಸಂಖ್ಯೆ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಕುಲಸಚಿವರು(ಮೌಲ್ಯಮಾಪನ) | 01 | - |
| 2 | ಸಹಾಯಕ | 0 | 01 |

| | | | |
|---|---|---|---|
| | ಕುಲಸಚಿವರು(ಮೌಲ್ಯಮಾಪನ) | | |
| 3 | ಶಾಖಾಧಿಕಾರಿ | 0 | 01 |
| 4 | ಹಿರಿಯ ಸಹಾಯಕರು | 0 | 01 |
| 5 | ಸಹಾಯಕರು | 0 | 02 |
| 6 | ಕಿರಿಯ ಸಹಾಯಕರು | 0 | 03 |
| 7 | ಡಿ.ಟಿ.ಪಿ.ಆಪರೇಟರ್ | 0 | 02 |
| 8 | ಡಿ.ಗ್ರೂಪ್ | 0 | 02 |

ಪರೀಕ್ಷಾ ವಿಭಾಗಕ್ಕೆ ಈ ಮೇಲಿನಂತೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ — **ಪರೀಕ್ಷಾ ವಿಭಾಗಕ್ಕೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿತು.**

**04.** **ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ತಾತ್ಕಾಲಿಕವಾಗಿ/ತಾತ್ವಿಕವಾಗಿ ಓರ್ವ ಸಿಬ್ಬಂದಿಯನ್ನು ಸಹಾಯಕ ಕುಲಸಚಿವರಾಗಿ ನೇಮಿಸುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ 02 ಸಹಾಯಕ ಕುಲಸಚಿವರ ಹುದ್ದೆ ಮಂಜೂರಾಗಿದ್ದು, ಪ್ರಸ್ತುತ 02 ಸಹಾಯಕ ಕುಲಸಚಿವರು ಸಿಬ್ಬಂದಿ, ಆಡಳಿತ, ಶೈಕ್ಷಣಿಕ ಮತ್ತು ಹಣಕಾಸು ಶಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪರೀಕ್ಷಾ ವಿಭಾಗದಲ್ಲಿ ಪ್ರಸ್ತುತ ಕುಲಸಚಿವರು(ಮೌಲ್ಯಮಾಪನ) ಇವರಿಗೆ ಸಹಾಯಕ್ಕಾಗಿ ಸಹಾಯಕ ಕುಲಸಚಿವರು ಇರುವುದಿಲ್ಲ. ಪರೀಕ್ಷಾ ವಿಭಾಗದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಂದ ಕಡತಗಳು ನೇರವಾಗಿ ಕುಲಸಚಿವರು(ಮೌಲ್ಯಮಾಪನ) ಇವರಿಗೆ ಬರುತ್ತಿರುವುದರಿಂದ ಇವುಗಳನ್ನು ಪರಿಶೀಲಿಸಲು ಓರ್ವ ಸಹಾಯಕ ಕುಲಸಚಿವರ ಅವಶ್ಯಕತೆಯಿದೆ. ಇರುವ 02 ಸಹಾಯಕ ಕುಲಸಚಿವರಿಗೆ ಸಾಕಷ್ಟು ಕಾರ್ಯಭಾರವಿರುವುದರಿಂದ ಇವರಿಗೆ ಪರೀಕ್ಷಾಂಗದ ಜವಾಬ್ದಾರಿಯನ್ನು ನಿರ್ವಹಿಸಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ವಾನ್ ಆರ್. ಜಗನ್ನಾಥ ಪೂಜಾರ್, ಯೋಜನಾ ಸಹಾಯಕರು(ಶೈಕ್ಷಣಿಕ) ಇವರನ್ನು ಯಾವುದೇ ಹೆಚ್ಚುವರಿ ಭತ್ಯೆಯಿಲ್ಲದೆ ತಾತ್ಕಾಲಿಕವಾಗಿ/ತಾತ್ವಿಕವಾಗಿ ಪರೀಕ್ಷಾ ವಿಭಾಗದ ಸಹಾಯಕ ಕುಲಸಚಿವರನ್ನಾಗಿ ನೇಮಿಸುವ ಬಗ್ಗೆ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ನಿರ್ಣಯ — **ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ತಾತ್ಕಾಲಿಕವಾಗಿ ಓರ್ವ ಸಿಬ್ಬಂದಿಯನ್ನು ಸಹಾಯಕ ಕುಲಸಚಿವರಾಗಿ ನೇಮಿಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆದು ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

**05.** **ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ CSR ಯೋಜನೆಯಡಿ ಒದಗಿಸಿರುವ 4500000/- ರೂ. ಅನುದಾನದಲ್ಲಿ ವಿಶ್ವವಿದ್ಯಾಲಯದ ತಿಪ್ಪಸಂದ್ರ ಆವರಣದಲ್ಲಿ ಹಸಿರು ಪರಿಸರ ನಿರ್ಮಾಣ ಮಾಡುವ ಬಗ್ಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯವು ತಿಪ್ಪಸಂದ್ರ ಹೋಬಳಿಯಲ್ಲಿ 100 ಎಕರೆ ಪ್ರಶಾಂತ ಕ್ಯಾಂಪಸ್ ಹೊಂದಿದ್ದು, ಇದರಲ್ಲಿ 5 ಎಕರೆ ಪರಿಸರ ವಲಯವನ್ನು ನಿರ್ಮಿಸಲು ಯೋಜಿಸುತ್ತಿದ್ದು, ಇದು ಭವಿಷ್ಯದಲ್ಲಿ

| | |
|---|---|
| | ಪ್ರಕೃತಿಯ ನಡುವೆ ವಿದ್ಯಾರ್ಥಿಗಳಿಗೆ ಕಲಿಕೆ ಮತ್ತು ಸಂಶೋಧನಾ ಕೇಂದ್ರವಾಗಲಿದೆ. ಪರಿಣಿತರ ಸಲಹೆ ಮೇರೆಗೆ, ಓಯಸಿಸ್ ಫೌಂಡೇಶನ್ ಫಾರ್ ಹ್ಯೂಮನ್ & ನ್ಯಾಚುರಲ್ ರಿಸೋರ್ಸ್ ಡೆವಲಪ್‌ಮೆಂಟ್ ಮತ್ತು ಕರ್ನಾಟಕ ಸಂಕೃತ ವಿಶ್ವವಿದ್ಯಾಲಯವು ಕ್ಯಾಂಪಸ್‌ನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಸ್ತಾಪಿಸಿದೆ. ಈ ಪರಿಸರ ವ್ಯವಸ್ಥೆಯ ಕಲ್ಪನೆಯು 30,000 ಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಅವುಗಳನ್ನು ಪೋಷಿಸ ಬೇಳೆಸುವುದರ ಮೂಲಕ ಸಾಕಾರಗೊಂಡು ಸ್ವಯಂ ಸಮರ್ಥನೀಯ ಹಂತವನ್ನು ತಲುಪುತ್ತದೆ. ಬಾರತೀಯ ಸ್ಟೇಟ್ ಬ್ಯಾಂಕ್ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಯೋಜನೆಯಡಿ ರೂ.45,00,000 (ನಲವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಮೊತ್ತವನ್ನು ಒದಗಿಸುತ್ತದೆ. ಎಸ್‌ಬಿಐನ ಈ ಧನಸಹಾಯದೊಂದಿಗೆ ಯೋಜನೆಯನ್ನು ಕಾರ್ಯಗತಗೊಳಿಸಲು ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ CSR ಯೋಜನೆಯಡಿ ಒದಗಿಸಿರುವ 4500000/- ರೂ. ಅನುದಾನವನ್ನು ನಿಯಮಾನುಸಾರ ವೆಚ್ಚ ಮಾಡಿ ವಿಶ್ವವಿದ್ಯಾಲಯದ ತಿಪ್ಪಸಂದ್ರ ಆವರಣದಲ್ಲಿ ಹಸಿರು ಪರಿಸರ ನಿರ್ಮಾಣ ಮಾಡುವ ಯೋಜನೆಯನ್ನು ಸಭೆಯು ಅನುಮೋದಿಸಿತು.** |

**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು - 560018.**

ಕುಲಪತಿಗಳು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು - 560018.